# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 561

ಸದಸ್ಯರ ಹೆಸರು : ಡಾ: ಕೆ. ಗೋವಿಂದರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 20-02-2023

ಉತ್ತರಿಸುವ ಸಚಿವರು : ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

***

| | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿ ಪ್ರತಿ ವರ್ಷ ಹೈಟೆನ್ಷನ್ ತಂತಿ ತಗುಲಿ ಮಕ್ಕಳ ಸಾವು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೆಂಗಳೂರು ನಗರದಲ್ಲಿ ಮಕ್ಕಳು ಆಟವಾಡುವಾಗ ಹೈಟೆನ್ಷನ್ ಲೈನಿನ ಸಂಪರ್ಕದಿಂದಾಗುವ ಪರಿಣಾಮದ ಅರಿವು ಇಲ್ಲದೆ ಲೈನಿನ ಸಂಪರ್ಕಕ್ಕೆ / ಆರ್ಕಿಂಗ್ ಝೋನ್‌ಗೆ ಬಂದು ವಿದ್ಯುತ್ ಅಪಘಾತವಾಗಿ ಸಾವು ಸಂಭವಿಸುತ್ತಿರುವುದು ಗಮನಕ್ಕೆ ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ, ಈ ಅಪಘಾತಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಬೆವಿಕಂಪನಿ ವ್ಯಾಪ್ತಿಯಲ್ಲಿನ ಗ್ರಾಹಕರಿಗೆ ಮುಂಜಾಗ್ರತಾ ಕ್ರಮಗಳನ್ನು ಸುರಕ್ಷತಾ ದೃಷ್ಟಿಯಿಂದ ತಪ್ಪದೇ ಪಾಲಿಸಲು ಬೆವಿಕಂನಿಂದ ವಿದ್ಯುತ್ ಅಪಘಾತಗಳನ್ನು ತಡೆಗಟ್ಟಲು ಇಲಾಖಾವತಿಯಿಂದ ಟಿವಿ, ದೂರವಾಣಿ, ಎಫ್-ಎಂ ಹಾಗೂ ದಿನಪತ್ರಿಕೆಗಳ ಮೂಲಕ ಹಲವಾರು ಸುರಕ್ಷತಾ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ನೀಡಲಾಗಿದೆ ಹಾಗೂ ಸಾರ್ವಜನಿಕರಿಗೆ ವಿದ್ಯುತ್ ಅಪಘಾತಗಳ ಬಗ್ಗೆ ಅರಿವು ಮೂಡಿಸಲು ಸುರಕ್ಷತಾ ಮಾಹಿತಿಯನ್ನು ರೈಲ್ವೆ ಸ್ಟೇಷನ್, ಬಸ್ ನಿಲ್ದಾಣಗಳಲ್ಲಿ ಎಲ್.ಇ.ಡಿ. ಪರದೆಯಲ್ಲಿ ಪ್ರದರ್ಶಿಸಲಾಗಿದೆ. ವಿದ್ಯುತ್ ಸುರಕ್ಷತೆಯ ಬಗ್ಗೆ ಆಗಿಂದಾಗ್ಗೆ ಕರ ಪತ್ರಗಳನ್ನು ಮತ್ತು ಭಿತ್ತಿ ಚಿತ್ರಗಳನ್ನೊಳಗೊಂಡ |
| ಇ) | ಅಪಾಯಕಾರಿ ಹೈಟೆನ್ಷನ್ ತಂತಿ ಕೆಳಗಡೆ ವಾಸಿಸುತ್ತಿರುವ ಮನೆಗಳ ಬಗ್ಗೆ ಕೆ.ಪಿ.ಟಿ.ಸಿ.ಎಲ್. ಬೆಸ್ಕಾಂ ಹಾಗೂ ಬಿ.ಬಿ.ಎಂ.ಪಿ. ಸೇರಿದಂತೆ ಸರ್ಕಾರಿ ಸಂಸ್ಥೆಗಳು ಯಾವುದೇ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳದಿರಲು ಕಾರಣವೇನು; ಇಲಾಖೆಗಳು ಜವಾಬ್ದಾರಿಯನ್ನು ಒಬ್ಬರ ಮೇಲೊಬ್ಬರು ಹಾಕುತ್ತಿರುವುದರಿಂದ ಈ ಸಮಸ್ಯೆಗೆ ಪರಿಹಾರ ಸಿಗದೆ ಇಂತಹ ಘಟನೆಗಳು ಸಂಭವಿಸುತ್ತಿದ್ದು ಇಂತಹ ಅಪಘಾತಗಳನ್ನು ತಡೆಗಟ್ಟಲು ಸರ್ಕಾರವು ತೆಗೆದುಕೊಂಡಿರುವ ದೀರ್ಘ ವಧಿ ಪರಿಹಾರೋಪಾಯಗಳೇನು? (ವಿವರಗಳನ್ನು ನೀಡುವುದು) | ಸಾರ್ವಜನಿಕವಾಗಿ ವಿದ್ಯುತ್ ಸುರಕ್ಷತಾ ನಿಯಮಗಳನ್ನು ಪಾಲನೆ ಮಾಡದಿರುವುದರಿಂದ ವಿದ್ಯುತ್ ಅಪಘಾತಗಳು ಸಂಭವಿಸುತ್ತಿದ್ದು ಅಪಘಾತಗಳನ್ನು ತಡೆಗಟ್ಟಲು ಈ ಕೆಳಕಂಡ ಸಾಕಷ್ಟು ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದು ಕೊಳ್ಳಲಾಗಿರುತ್ತದೆ.<br><br>**ಬೆಸ್ಕಾಂ:**<br>1. ಸಾರ್ವಜನಿಕರ ಹಿತದೃಷ್ಟಿಯಿಂದ ಹೈ-ವೋಲ್ಟೇಜ್ ಮಾರ್ಗಗಳ ಕೆಳಗೆ ನಿರ್ಮಿಸಿರುವ ಸುರಕ್ಷತಾವಲ್ಲದ ಕಟ್ಟಡಗಳ ಮಾಲೀಕರಿಗೆ ಸಿಇಎ ರೆಗ್ಯೂಲೇಷನ್ 2010 ರ 61(2) & 61(3) ಪ್ರಕಾರ ಸೂಚನಾ ಪತ್ರವನ್ನು ನೀಡಿ ಸುರಕ್ಷತಾ ಅಂತರವನ್ನು ಕಾಯ್ದುಕೊಳ್ಳಲು ಮತ್ತು ಅಪಘಾತ ಉಂಟಾಗದಂತೆ ಕ್ರಮ ಕೈಗೊಳ್ಳಲು ಮುಂಜಾಗ್ರತಾ ಕ್ರಮವಾಗಿ ಸೂಚನೆಯನ್ನು ನೀಡಲಾಗಿರುತ್ತದೆ. |

...2

Scanned with CamScanner

2. ಬಿ.ಬಿ.ಎಂ.ಪಿ ಹಾಗೂ ಕೆ.ಪಿ.ಟಿ.ಸಿ.ಎಲ್ ಅಧಿಕಾರಿಗಳ ಜಂಟಿ ಸಮೀಕ್ಷೆಯನ್ನು ನಡೆಸಿ ಸುರಕ್ಷತಾ ಅಂತರವಿಲ್ಲದೇ ಸುರಕ್ಷತೆ ಹೊಂದಿಲ್ಲದ ಕಟ್ಟಡಗಳನ್ನು ತೆರವುಗೊಳಿಸಲು ಗುರುತಿಸಲಾಗಿರುತ್ತದೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ಬಿ.ಬಿ.ಎಂ.ಪಿ ಆಯುಕ್ತರ ಗಮನಕ್ಕೆ ತಂದು ಮುಂದಿನ ಕ್ರಮಕ್ಕಾಗಿ ಕೋರಲಾಗಿದೆ.
3. ಈ ಮಾರ್ಗಗಳ ಕೆಳಗೆ ನೀಡಿರುವ ಎಲ್ಲಾ ತಾತ್ಕಾಲಿಕ ವಿದ್ಯುತ್ ಸಂಪರ್ಕಗಳನ್ನು ಕಡಿತಗೊಳಿಸಿ ಗ್ರಾಹಕರಿಗೆ ಸಿಇಎ ರೆಗ್ಯೂಲೇಷನ್ 2010 ರ 61(2) & 61(3) ಪ್ರಕಾರ ಸೂಚನಾ ಪತ್ರವನ್ನು ನೀಡಲಾಗಿರುತ್ತದೆ.

ಕವಿಪ್ರನಿನಿ:

1. ಕಟ್ಟಡಗಳನ್ನು ನಿಯಮಾನುಸಾರ ಸುರಕ್ಷತಾ ಅಂತರಗಳನ್ನು ಕಾಪಾಡದೇ ನಿಯಮಗಳನ್ನು/ ನಿಬಂಧನೆಗಳನ್ನು ಉಲ್ಲಂಘಿಸಿ ನಿರ್ಮಿಸುತ್ತಿರುವುದರಿಂದ ವಿದ್ಯುತ್ ಅಪಘಾತಗಳು ಸಂಭವಿಸುತ್ತಿದ್ದು, ಅಂತಹ ಕಟ್ಟಡಗಳ ಮಾಲೀಕರಿಗೆ ನೋಟಿಸ್ ಜಾರಿ ಮಾಡಲಾಗಿರುತ್ತದೆ ಮತ್ತು ಪ್ರತಿ ವರ್ಷ ನೋಟಿಸ್‌ಗಳನ್ನು ನೀಡುವುದನ್ನು ಪುನರಾವರ್ತನೆ ಮಾಡಲಾಗುತ್ತಿದೆ. ಸದರಿ ವಿಷಯದ ಬಗ್ಗೆ ಇತರ ಇಲಾಖೆಗಳಾದ ಬಿಬಿಎಂಪಿ, ಬಿಡಬ್ಲ್ಯೂಎಸ್‌ಎಸ್‌ಬಿ, ಬೆಸ್ಕಾಂ, ಪೋಲಿಸ್ ಇಲಾಖೆ ಎಲ್ಲರಿಗೂ ಮಾಹಿತಿ ನೀಡಿ ಸೂಕ್ತ ಕ್ರಮಕ್ಕಾಗಿ ಕೋರಲಾಗಿದೆ.
2. ಆಗ್ಗಿಂದಾಗ್ಗೆ ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ವಿದ್ಯುತ್ ಅಪಘಾತ, ಅಪಾಯಕಾರಿ ವಲಯಗಳ ಬಗ್ಗೆ ಮನವರಿಕೆ ಮಾಡಿಕೊಟ್ಟು ಅಸುರಕ್ಷಿತಾ ಕಟ್ಟಡಗಳನ್ನು /ಭಾಗಗಳನ್ನು ತೆರವುಗೊಳಿಸಿ ಸುರಕ್ಷತಾ ಅಂತರಗಳನ್ನು ಕಾಪಾಡಲು ಮತ್ತು ಸುರಕ್ಷತಾ ಅಂತರವನ್ನು ಕಾಪಾಡದೇ ಕಟ್ಟಡಗಳನ್ನು ನಿರ್ಮಾಣ ಮಾಡದಂತೆ ಸಾರ್ವಜನಿಕ ಪ್ರಕಟಣೆಯನ್ನು ಕನ್ನಡ ಮತ್ತು ಆಂಗ್ಲ ದಿನಪತ್ರಿಕೆಗಳಲ್ಲಿ ನೀಡಲಾಗುತ್ತಿದೆ. ಸದರಿ ಸಾರ್ವಜನಿಕ ಪ್ರಕಟಣೆಯಲ್ಲಿ ವಿದ್ಯುತ್ ಮಾರ್ಗಗಳ ಕೆಳಗೆ ಕಟ್ಟಡಗಳನ್ನು ನಿರ್ಮಿಸದಂತೆ ನಿಯಮಾವಳಿ ಮತ್ತು ನಿಬಂಧನೆಗಳ ಪ್ರಕಾರ ಕನಿಷ್ಟ ಸಮಾನಾಂತರವನ್ನು ಕಾಪಾಡಬೇಕಾದ ಬಗ್ಗೆ ಮತ್ತು ವಿದ್ಯುತ್ ಮಾರ್ಗಗಳ ಸನಿಹದಲ್ಲಿ ತೆಗೆದುಕೊಳ್ಳಬೇಕಾದ ಸುರಕ್ಷತಾ ಕ್ರಮಗಳ ಬಗ್ಗೆ ತಿಳಿಸಿ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ.
3. ವಿದ್ಯುತ್ ಮಾರ್ಗಗಳಲ್ಲಿ ಅಪಾಯಕಾರಿ ಸ್ಥಳಗಳಲ್ಲಿರುವ ವಲಯಗಳ ಸುತ್ತಮುತ್ತಲಿನ ಕಟ್ಟಡಗಳ ಮಾಲೀಕರಿಗೆ ಮತ್ತು ಕಟ್ಟಡಗಳಲ್ಲಿ ವಾಸಿಸುತ್ತಿರುವವರಿಗೆ ವಿದ್ಯುತ್ ಮಾರ್ಗ ನಿರ್ವಹಣಾ ಉಪ ವಿಭಾಗದಲ್ಲಿನ ಅಧಿಕಾರಿಗಳು ಸಭೆ ಆಯೋಜಿಸಿ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳುವುದರ ಬಗ್ಗೆ, ವಿದ್ಯುತ್ ಅಪಘಾತಗಳು ಸಂಭವಿಸಲು ಕಾರಣವಾಗುವ ಚಟುವಟಿಕೆಗಳ ಬಗ್ಗೆ ಕರಪತ್ರಗಳಲ್ಲಿ ಮುದ್ರಿಸಿ ಮತ್ತು ಧ್ವನಿವರ್ಧಕಗಳ ಮುಖಾಂತರ ಜಾಗೃತಿ ಸಭೆಗಳನ್ನು ನಡೆಸಿ ಅರಿವು ಮೂಡಿಸಲಾಗುತ್ತಿದೆ.

ಸಂಖ್ಯೆ: ಎನರ್ಜಿ 46 ಇಬಿಎಸ್ 2023

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು

Scanned with CamScanner